ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ ( 2321– 2519 ISSN NO)

**ಸಂಪುಟ 16 ; ಸಂಚಿಕೆ 1; ಜನವರಿ–ಏಪ್ರಿಲ್ 2022 ;**

**ಅಂಕಣ- ಭರತಕೌತುಕ**

# ಕೋಲಾಟ (ದಂಡರಾಸ)

- ಕಾಂಚನ ರೋಹಿಣಿ ಸುಬ್ಬರತ್ನಂ

ಹೆಸರಾಂತ ಸಂಗೀತ ವಿದ್ವಾಂಸರು, ಸಂಶೋಧಕರು.

No part of this publication is allowed for copying or reproducing. Copyright protected. Copyright infringement is punishable offence.



ಸಮೂಹದಲ್ಲಿ ನರ್ತಿಸುವ ಪಿಂಡೀ ನರ್ತನವು ಪ್ರಸಿದ್ಧವಾದರೆ, ಸಮೂಹ ನರ್ತನವಾದ ಕೋಲಾಟಕ್ಕೆ ಭಾಗವತಪುರಾಣದಷ್ಟೆ ಇತಿಹಾಸವಿದೆಯೆನ್ನಬಹುದು. ಕೃಷ್ಣಪರಮಾತ್ಮನ ರಾಸಲೀಲೆಯ ಕಥೆಗಳು ಸದಾ ಕಾಲವೂ ಜನಮಾನಸದಲ್ಲಿ ನಲಿದಾಡಿ, ಭಗವಂತನ ರಾಸಕ್ರೀಡೆಯ ಕಥೆಗಳು ರೋಮಾಂಚನವನ್ನುಂಟು ಮಾಡುವುದಲ್ಲದೆ ಇಂದಿಗೂ ಪಾರಂಪರಿಕ ಯುದ್ಧದ ವರಸೆಗಳು ಜನಪದರಿಂದ ಕೇಳಿಯಾಗಿ ಮಾರ್ಪಟ್ಟು, ರಾಸನೃತ್ಯವು ರಾಸಕೇಳಿಯಾಗಿ (ಕ್ರೀಡೆಯಾಗಿ), ಪಾರಂಪರಿಕವಾದ ಕಲೆಯೂ ಆಗಿ ಭಾರತೀಯ ಸಂಸ್ಕೃತಿಯಲ್ಲಿ ಉಳಿದುಬಂದಿದೆ. ರಾಸಲೀಲೆಯನ್ನು ಕಾಮವಿಜಯಲೀಲಾ ಎಂದೂ ಕರೆಯುತ್ತಾರೆ. ರಾಮನು ವನವಾಸದಲ್ಲಿದ್ದಾಗ ಅಲ್ಲಿದ್ದ ಋಷಿಗಳು ಪರಮಾತ್ಮನಾದ ಆತನ ಸಖ್ಯವು ಇನ್ನಷ್ಟು ದೊರೆಯಬೇಕೆಂದು ಉತ್ಕಟವಾಗಿ ಹಾತೊರೆದು ಪ್ರಾರ್ಥಿಸಿದಾಗ ಭಗವಂತನು ತನ್ನ ಕೃಷ್ಣಾವತಾರದಲ್ಲಿ ಅವರೆಲ್ಲರ ಆಸೆಯನ್ನು ಪೂರೈಸುವುದಾಗಿ ವರವನ್ನಿತ್ತನಂತೆ. ಕೃಷ್ಣಾವತಾರದಲ್ಲಿ ಋಷಿಗಳು ಗೋಪಿಗಳಾಗಿ ಜನ್ಮವನ್ನೆತ್ತಿ ತಮ್ಮ ಜೀವನದ ಸಕಲವನ್ನೂ ತೊರೆದು - ಮರೆತು ಆತನನ್ನೇ ಮೊರೆಹೋಗಿ ರಾಸಕ್ರೀಡೆಯನ್ನಾಡಿ,

ತಮ್ಮೆಲ್ಲರೊಂದಿಗೂ ಏಕಕಾಲದಲ್ಲಿ, ಯೋಗಮಾಯೆಯಲ್ಲಿ ರಾಸಲೀಲೆಯನ್ನಾಡಿದ, ಶಾಶ್ವತ ಬ್ರಹ್ಮಚಾರಿಯಾದ ಕೃಷ್ಣ ಪರಮಾತ್ಮನಲ್ಲಿ ತಮ್ಮ ಜೀವಾತ್ಮನನ್ನು ಒಂದಾಗಿಸಿ ಕೃತಾರ್ಥರಾದರೆಂದು ಪುರಾಣಗಳು ಹೇಳುತ್ತವೆ.

ಕೋಲು (ದಂಡ) ಗಳೊಡನೆಯೂ ಬರೇ ಕೈಚಪ್ಪಾಳೆಗಳೊಂದಿಗೂ ಆಡುವಂತಹ ಈ ರಾಸಕ್ರೀಡೆಯು ಭಾರತಾದ್ಯಂತ ಮಾತ್ರವಲ್ಲದೆ ವಿಶ್ವದಾದ್ಯಂತ ವಿವಿಧ ರೀತಿಗಳಲ್ಲಿ ವೈವಿಧ್ಯತೆಯನ್ನು ಹೊಂದಿ ವ್ಯಾಪಿಸಿದೆ. ಗೋವಳರಾದ ಜನಪದರೂ, ಆದಿವಾಸಿಗಳೂ ಮಾತ್ರವಲ್ಲದೆ ಸರ್ವರೀತಿಯಾದ ಜನಪದವೂ ವಿವಿಧ ಸಂದರ್ಭಗಳಲ್ಲಿ ನರ್ತಿಸುವ 'ರಾಸ' ಎನ್ನುವ ಈ ಕ್ರೀಡೆಯ ಬಗ್ಗೆ ಅರಿವು ಮೂಡಬೇಕಾದರೆ, ರಾಸವೆಂಬ ಪ್ರಾಚೀನ ಪ್ರಬಂಧದ ಬಗ್ಗೆ ತಿಳಿಯದೆ ಹೋದಲ್ಲಿ ಅದರ ಪಾರಂಪರಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಮೌಲ್ಯದ ಪೂರ್ಣ ಅರಿವು ಉಂಟಾಗದು. ಕೋಲಾಟಕ್ಕೆ ಸಂಬಂಧಿಸಿದ ಸಂಗೀತಶಾಸ್ತ್ರೀಯ ಸಂಗತಿಗಳನ್ನು ಮುಂದೆ ಹೇಳಲಾಗುವುದು.

ರಾಸವೆಂದರೆ ಶಬ್ದ, ಧ್ವನಿ ಎಂಬ ಅರ್ಥಗಳಿವೆ. ಪ್ರಬಂಧವೆಂದರೆ ಕಟ್ಟಿದ್ದು; ರಚಿಸಿದ್ದು ಎಂದರ್ಥ, ಸಾಮಾನ್ಯಮಾತಿನಲ್ಲಿ ಹೇಳುವುದಾದರೆ ಹಾಡು. ಶಾಸ್ತ್ರೀಯಸಂಗೀತದಲ್ಲಿಯೂ ಜನಪದಸಂಗೀತದಲ್ಲಿಯೂ ಧಾರ್ಮಿಕ, ಸಾಂಸ್ಕೃತಿಕ ಸಂಪ್ರದಾಯಗಳ ಆಚರಣೆ ಇತ್ಯಾದಿ ಸಮಯಗಳಲ್ಲಿಯೂ ಇರುವಷ್ಟು ಹಾಡುಗಳ ಸಂಖ್ಯೆಯು ಭಾರತೀಯ ಸಂಗೀತದಲ್ಲಿರುವಷ್ಟು ಪ್ರಪಂಚದಲ್ಲಿ ಬೇರೆಲ್ಲಿಯೂ ಕಾಣಸಿಗದು. ಈ ಪ್ರಬಂಧಗಳಲ್ಲಿ ಪ್ರಾಚೀನ ಗೌರವಿತವಾದ 'ಶಾಸ್ತ್ರೀಯ ಸಂಗೀತ'ದ ಪ್ರಬಂಧಗಳೂ, ಸಾಹಿತ್ಯ ಪ್ರಕಾರಗಳೂ ಇರುತ್ತಿದ್ದವು. ವಿರಕ್ತಿಯನ್ನು ಉಪದೇಶಿಸಿ ಆಧ್ಯಾತ್ಮಿಕ ವಿಷಯಕವಾದ ಹಾಡುಗಳೂ, ವಸಂತೋತ್ಸವ - ಹೋಳಿ ಇತ್ಯಾದಿ ಹಬ್ಬ ಹರಿದಿನಗಳಲ್ಲಿ ಸಂಭ್ರಮ ಸಂತೋಷಗಳಲ್ಲಿ ಹಾಡುವ ಪ್ರಬಂಧಗಳೂ, ವಿವಾಹ, ವಿಜಯಗಳ ಸಂದರ್ಭ ಮುಂತಾದವುಗಳಲ್ಲಿ ಹಾಡಲು ತಕ್ಕದಾದ ರಚನೆಗಳೂ, ಜೈನ ಮೊದಲಾದ ಮತದವರು ವಿಶಿಷ್ಟ ಸಂದರ್ಭಗಳಲ್ಲಿ ಹಾಡಲು ಉಪಯೋಗಿಸುತ್ತಿದ್ದ ಅನೇಕ ಪ್ರಬಂಧಗಳೂ ಸಹ ಇದ್ದವು. ಹಾಗೆಂದು ಕೇವಲ ಶಾಸ್ತ್ರೀಯಸಂಗೀತಪ್ರಬಂಧಗಳೋ ಅಥವಾ ಸಾಂಪ್ರದಾಯಿಕ ಅಥವಾ ಧಾರ್ಮಿಕ ಸಂಗೀತ ಪ್ರಬಂಧಗಳು ಮಾತ್ರವೋ ಹಿಂದಿನ ದಿನಗಳಲ್ಲಿ ರೂಢಿಸಿತ್ತು ಎಂದರ್ಥವಲ್ಲ. ಜನಪದ ಸಂಗೀತದ ಓವಿ, ಸುವ್ವಾಲಿ ಮುಂತಾದ ಹಲವು ಹಾಡುಗಳನ್ನೂ ಸಹ ಸಂಗೀತ ಶಾಸ್ತ್ರ ಗ್ರಂಥಗಳು ವರ್ಣಿಸುತ್ತವೆ.

ಇಂತಹ ಅನೇಕ ಲೌಕಿಕ, ಜನಪದ, ಹಾಗೂ ಆದಿವಾಸಿಗಳ ಸಂಗೀತದ ಹಾಡುಗಳಲ್ಲಿ ಕೋಲಾಟದ ಹಾಡುಗಳು ಒಂದು ವಿಶಿಷ್ಟವಾದ ರಚನೆಯ ರೂಪವನ್ನೂ ಸ್ಥಾನವನ್ನೂ ಪಡೆದಿವೆ. ನರ್ತಕರು ಕೆಲವೊಮ್ಮೆ ಹಾಡುಗಳಿಲ್ಲದೆ ಡೋಲು, ತಮಟೆ, ಹರೆ, ಮದ್ದಳೆಗಳಂತಹ ಲಯವಾದ್ಯಗಳಿಗೆ ಮಾತ್ರ ನರ್ತಿಸಿದರೆ, ಕೆಲವೊಮ್ಮೆ ಲಯವಾದ್ಯದೊಡನೆ ಕೊಳಲಿನಂತಹ ಗಾಳಿವಾದ್ಯಗಳನ್ನು ಉಪಯೋಗಿಸುವುದೂ ಉಂಟು. ಪುರುಷರ ಕೋಲಾಟವಿಧಗಳು ಬಹುಪಾಲು ಯುದ್ಧದ ವರಸೆಗಳನ್ನು ಹೋಲುತ್ತವೆ. ನರ್ತನಕಾರರು ಲಯವಾದ್ಯಗಳ ಬೇರೆ ಬೇರೆ ವಿನ್ಯಾಸಗಳ ಲಯ ಹಾಗೂ ಗತಿಗಳಿಗೆ ತಕ್ಕಂತೆ ತಾವೂ ಕೋಲುಗಳನ್ನು ತಟ್ಟಿಕೊಳ್ಳುತ್ತಾ

No part of this publication is allowed for copying or reproducing. Copyright protected. Copyright infringement is punishable offence.

ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ ( 2321– 2519 ISSN NO)

## ಸಂಪುಟ 16 ; ಸಂಚಿಕೆ 1; ಜನವರಿ–ಏಪ್ರಿಲ್ 2022 ;

### ಅಂಕಣ- ಭರತಕೌತುಕ

ತಮ್ಮ ಅಕ್ಕ ಪಕ್ಕದವರೊಂದಿಗೂ ಮಂಡಲಗಳನ್ನು ರಚಿಸಿ, ವಿನ್ಯಾಸಗಳನ್ನು ಏರ್ಪಡಿಸಿಕೊಂಡು ಕೋಲು ತಟ್ಟುತ್ತಾ, ಅನೇಕ ವಿಧವಾದ ಲಾಗು ಹಾರುವಿಕೆಗಳು, ಕಷ್ಟಕರವಾದ ಅಡವುಗಳು, ವೈವಿಧ್ಯಮಯ ಮೈಬಳಕು, ಬಾಗುಗಳೆಂದಿಗೆ ನರ್ತಿಸುತ್ತಾರೆ. ಸ್ತ್ರೀಯರ ನರ್ತನವು ಇವುಗಳನ್ನೆಲ್ಲ ಹೊಂದಿದ್ದರೂ ಕಾದಾಟದ ಶೈಲಿಯನ್ನು ಅನುಕರಿಸುವುದಿಲ್ಲ. ಬೇರೆ ಅನೇಕ ದೇಶಗಳಲ್ಲಿಯೂ ಬಹಳ ವೈವಿಧ್ಯಮಯ, ಸುಂದರ ವೇಷಭೂಷಣಗಳಿದ್ದರೆ, ಕೆಲವು ಆದಿವಾಸಿಗಳಲ್ಲಿ ಅವರದ್ದೇ ಆದ ಸಂಪ್ರದಾಯದ ರೀತಿಯ ವೇಷಗಳಿರುತ್ತವೆ. ಭಾರತದಲ್ಲಂತೂ ರಾಸಲೀಲೆಯ ವೇಷಭೂಷಣಗಳು ಸುಮನೋಹರವಾಗಿ, ವೈಭವವಾಗಿರುತ್ತವೆ. ಕೆಲವು ದೇಶಗಳಲ್ಲಿ ನರ್ತನಕಾರರು ಏಕದಂಡಗಳಲ್ಲಿಯೇ ನರ್ತಿಸಿದರೆ, ಕೆಲವು ದೇಶಗಳು ಹಾಗೂ ಪ್ರದೇಶಗಳಲ್ಲಿ ದ್ವಿದಂಡಗಳನ್ನುಪಯೋಗಿಸಿ ನರ್ತಿಸುತ್ತಾರೆ. ದಂಡಗಳ ಅಳತೆಗಳಲ್ಲೂ ವ್ಯತ್ಯಾಸಗಳಿರುತ್ತವೆ. ದಂಡಗಳು ಇಲ್ಲದೆಯೂ ಕೈಗಳಲ್ಲಿ ಚಪ್ಪಾಳೆ ತಟ್ಟುತ್ತಾ, ತೊಡೆಗಳನ್ನು ತಟ್ಟಿಕೊಳ್ಳುತ್ತಾ ಕೋಲಾಟದ ರೀತಿಯಲ್ಲಿಯೇ ನರ್ತಿಸುವುದೂ ಉಂಟು. ಇವುಗಳಲ್ಲದೆ, ಬಹಳ ಉದ್ದವಾದ ಬಿದಿರಿನ ಗಳುಗಳನ್ನು ವೈಭವಯುತವಾಗಿ ಮೆರವಣಿಗೆಯಲ್ಲಿ ತಂದು (ಕೆಲವು ದೇಶಗಳಲ್ಲಿ ಈ ಬಿದಿರುಗಳ ಮೇಲೆಯೇ ನರ್ತಿಸುವ ಸ್ತ್ರೀಯರನ್ನು ಕುಳ್ಳಿರಿಸಿಕೊಂಡು ವೈಭವೋಪೇತವಾಗಿ ಕರೆದುಕೊಂಡು ಬರುತ್ತಾರೆ!) ಪುರುಷರು ನೆಲದ ಮೇಲಿಟ್ಟು ಲಯಕ್ಕೆ ಸರಿಯಾಗಿ ಚೌಕಾಕಾರದ ಅಂಕಣಗಳು ಬರುವ ರೀತಿ ಆಚೀಚೆ ಮಾಡುತ್ತ, ತಟ್ಟುತ್ತ, ಪರಸ್ಪರ ಕುಟ್ಟುತ್ತಿದ್ದರೆ ಸ್ತ್ರೀಯರು ಬಿದಿರುಗಳ ಅಂಕಣದ ಒಳಗೆ, ಮಧ್ಯೆ ಆಚೀಚೆ, ನೆಗೆಯುತ್ತ ನರ್ತಿಸುತ್ತಾರೆ. ಈ ನರ್ತನವು ಅತೀವವಾದ ಏಕಾಗ್ರತೆ, ಅವಧಾನಗಳನ್ನು ಅವಲಂಬಿಸಿದೆ. ಇಲ್ಲದಿದ್ದರೆ ನರ್ತಕಿಗೆ ಅಪಾಯವು ಕಟ್ಟಿಟ್ಟ ಬುತ್ತಿ. ಮಿಜ್ಹೋರಾಮ್ ನ ಚೆರಾವ್, ಚಾಪ್ಕರ್ ಕುಟ್ ನೃತ್ಯಗಳು ಇದಕ್ಕೆ ಉದಾಹರಣೆಗಳು. ಇಂತಹ ನರ್ತನಗಳ ರೀತಿಯು ಕೆಲವು ಆದಿವಾಸಿ ಪುರುಷರಲ್ಲಿಯೂ ಇದೆ ! ಅವರ ಅವಧಾನ ಚಾತುರ್ಯವನ್ನೂ , ಲಯಜ್ಞಾನವನ್ನೂ ಸರ್ವದಾ ಮೆಚ್ಚುವಂತಹುದು!





No part of this publication is allowed for copying or reproducing. Copyright protected. Copyright infringement is punishable offence.

ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ ( 2321– 2519 ISSN NO)

ಸಂಪುಟ 16 ; ಸಂಚಿಕೆ 1; ಜನವರಿ–ಏಪ್ರಿಲ್ 2022 ;

ಅಂಕಣ- ಭರತಕೌತುಕ

**ಪ್ರಪಂಚದ ಬೇರೆಡೆಗಳಲ್ಲಿ ಕೋಲಾಟ ವಿಧಗಳು —**

ವಿಶ್ವದಾದ್ಯಂತ ಮುಕ್ಕಾಲು ಪಾಲು ದೇಶಗಳಲ್ಲಿ ಏಕದಂಡ ಅಥವಾ ಎರಡೂ ಇರುವಂತಹ ಕೋಲಾಟಗಳು ಅಥವಾ ಕೋಲಿಲ್ಲದೆ ಕೋಲಾಟದಂತೆ ನರ್ತಿಸುವ ನರ್ತನಗಳ ಬಗ್ಗೆ ಕೆಲವೇ ಕೆಲವನ್ನು ಉದಾಹರಣೆಗಾಗಿ ಇಲ್ಲಿ ಹೇಳಬಹುದು — ಬರ್ಬರರಲ್ಲಿ ಕವಿಗಾಯಕನು ಹಾಡಿದ ಪಂಕ್ತಿಯನ್ನು ಉಳಿದವರು ಗೋಷ್ಠಿಯಲ್ಲಿ ಅನುಸರಿಸಿ ಹಾಡುವುದುಂಟು. ಇವುಗಳಲ್ಲಿ ಸಂಗೀತ ವಾದ್ಯಗಳು ಜೊತೆ ಇರುವುದು ವಿರಳ. ಆದರೆ ಚಪ್ಪಾಳೆ, ಮೈ ತೂಗುವುದು, ಎದೆ ಹೊಟ್ಟೆ ತೊಡೆಗಳನ್ನು ತಟ್ಟಿ ಕೊಳ್ಳುವುದು, ಹೆಜ್ಜೆಯನ್ನು ಕುಟ್ಟುವುದು, ಕೋಲಿನಿಂದ ಕೋಲನ್ನು ಹೊಡೆಯುವುದು ಇತ್ಯಾದಿ ಲಯಬದ್ಧ ಕ್ರಿಯೆಗಳಿಂದ ಹಾಡಿನ ಛಂದಸ್ಸನ್ನು ಈ ಬರ್ಬರರು ಲಯದಲ್ಲಿ ರೂಢಿಸಿಕೊಂಡರೆ, ಹಲವು ಬರ್ಬರ ಜನಾಂಗದವರು ಒಬ್ಬೊಬ್ಬರೇ ಸ್ವಗತದಲ್ಲಿ ಮೆಲುದನಿಯಲ್ಲಿ ಹಾಡಿಕೊಳ್ಳುವಂತೆ ಹಾಡುವಾಗಲೂ, ಮದ್ದಳೆ ಹರೆ ಮುಂತಾದ ಚರ್ಮ ವಾದ್ಯಗಳ ವಾದನವನ್ನು ಮಾಡುತ್ತ - ಮುಗಿಯುವಾಗ ಸಕಾರಿ-ಬುಡಕಟ್ಟಿನವರ ಕೋಲಾಟದಲ್ಲಿದ್ದಂತೆ ಎಲ್ಲರೂ ಒಟ್ಟಿಗೆ ಉಚ್ಚವಾಗಿ ಕೂಗುವುದುಂಟು.

ಆಸ್ಟ್ರೇಲಿಯಾ, ನ್ಯೂಜಿಲೆಂಡ್, ರಷ್ಯಾ, ಸ್ಪೇನ್, ಮುಂತಾದ ಅನೇಕ ದೇಶಗಳಲ್ಲಿ ತೊಡೆತಟ್ಟಿ, ಕಾಲು ಕೈಗಳನ್ನು ಚಮತ್ಕಾರವಾಗಿ ತಟ್ಟಿಕೊಂಡು ಅದ್ಭುತವಾಗಿ ಮಂಡಲಾಕಾರವಾಗಿ ನರ್ತಿಸುವ ತಂಡಗಳು ಇದ್ದರೂ ಕೋಲನ್ನು ಉಪಯೋಗಿಸಿ ನರ್ತಿಸುವ ನೃತ್ತರೀತಿಯು ಅವರಲ್ಲಿ ಕಾಣುವುದಿಲ್ಲ. ಸಿಂಗ್ ಸಿಂಗ್ ಸಿಂಗ್ ನೃತ್ತದಲ್ಲಿ ಸುಮಾರು ಮೂರೂವರೆ ಅಡಿಗಳ ಒಂದೇ ಕೋಲನ್ನು ಉಪಯೋಗಿಸಿದರೂ, ಕೋಲಿನಲ್ಲಿ ವಿಶೇಷ ಚಮತ್ಕಾರವಿಲ್ಲದೆ, ಲಯಕ್ಕೆ ಅದನ್ನು ಉಪಯೋಗಿಸಿಕೊಳ್ಳದೆ, ಬರೇ ಮೈಬಾಗು, ಬಳುಕುವಿಕೆಯಿಂದ ನರ್ತಿಸುತ್ತಾರೆ. ರೂರಿಗ್, ಅಮರಿ, ಶಮೂಜ್ಞಾ ನೃತ್ಯಗಳೂ ಸಹ ಅದೇ ರೀತಿ ಇವೆ. ಇರಾಕ್ ಹಾಗೂ ಈಜಿಪ್ಟಿನ ಸೈದಿ ನೃತ್ಯಗಾರರೂ ನಾಲ್ಕು ಅಡಿಗಳಿಗಿಂತಲೂ ಉದ್ದವಾದ ಒಂದು ಕೋಲನ್ನು ಉಪಯೋಗಿಸಿದರೂ ಕೋಲಿನಲ್ಲಿಯೇ ಅವರು ಮಾಡುವಂತಹ ವಿಶೇಷವಾದ ಚಮತ್ಕಾರಗಳೇನೂ ಕಾಣುವುದಿಲ್ಲ.

ಇರಾನ್ ಹಾಗೂ ಆಫ್ಘಾನಿಸ್ತಾನದ ಚೂಬ್ ಬಾಸಿ, (=ಚೊಬ್ ಬಾಸಿ, ಚುಬ್ ಬಾಸಿ) ಕೋಲಾಟವು ಪುರುಷರು ಮಾಡುವಂತಹದಾಗಿದ್ದು ಇದು ಭಾರತದಿಂದಲೇ ಪ್ರಾಚೀನದಲ್ಲಿ ಅಲ್ಲಿಗೆ ಹೋದ ಕಲೆಯೆಂದು ಹೇಳುತ್ತಾರೆ. ಆಫ್ಘಾನಿಸ್ತಾನವು ಪ್ರಾಚೀನದಲ್ಲಿ ಬೃಹದ್ಭಾರತದಲ್ಲಿ ಸೇರಿದ್ದ ದೇಶವಾದ್ದರಿಂದ ಇದೇನು ಆಶ್ಚರ್ಯವಿಲ್ಲ. ಆಸ್ಟ್ರೇಲಿಯಾ - ನ್ಯೂಜಿಲೆಂಡ್ ಗಳ ಹಕ ಮವೋರಿ ಹಾಗೂ ಅಬಾರಿಜಿನ್ ನೃತ್ಯಗಳು ಎರಡು ಕೋಲುಗಳನ್ನು ಉಪಯೋಗಿಸಿದರೂ ಭಾರತೀಯ ಕೋಲಾಟಗಳಂತೆ ಲಯ, ಸಂಗೀತ, ವೇಷಭೂಷಣಗಳಲ್ಲಿ ವೈವಿಧ್ಯತೆಯು ತೋರುವುದಿಲ್ಲ.

No part of this publication is allowed for copying or reproducing. Copyright protected. Copyright infringement is punishable offence.



ಈಜಿಪ್ಟ್ ನ ಮವೋರಿ ಹಕ ನೃತ್ಯ




ಥರು ಕೋಲಾಟ

ಕೋಲಾಟವಾದ 'ಥರು' ನೃತ್ಯವು ವೈವಿಧ್ಯತೆಗಳನ್ನು ಹೊಂದಿದ್ದು ಅದರ ವಿಧಗಳಾದ ಚಿಟ್ವನ್ ಝ್ಸುವಾನಿ ಥರು ಸೋಮಾನ ಥರು ಇತ್ಯಾದಿಗಳಲ್ಲಿ ಸ್ತ್ರೀಯರು ಮಂಡಲಾಕಾರವಾಗಿ ಸುತ್ತುವರೆದು ಹರೆ, ಮದ್ದಲೆಗಳಂತಹ ತಾಳವಾದ್ಯಗಳನ್ನಿಟ್ಟು ಎರಡು ಕೋಲುಗಳನ್ನೂ ವಾದ್ಯದ ಲಯಕ್ಕೆ ತಕ್ಕಂತೆ ಮಧ್ಯಮ, ದ್ರುತಗತಿಗಳಲ್ಲಿ ಬಡಿಯುತ್ತ ನರ್ತಿಸುತ್ತಾರೆ. ಪುರುಷರು ಸುಮಾರು ಮೂರೂವರೆ ಅಡಿಗಳಷ್ಟು ಉದ್ದದ ಒಂದು ಕೋಲನ್ನು ಮಾತ್ರ ಒಬ್ಬರಿಗೊಬ್ಬರು ಪರಸ್ಪರವಾಗಿ ಬಡಿಯುತ್ತ ನರ್ತಿಸುತ್ತಾರೆ. ಇದು ಕಾಣಲು ಯುದ್ಧ ನೃತ್ಯದಂತೆಯೂ ಇದ್ದು ಕೆಲವು ಬಾರಿ ಸ್ತ್ರೀಯರೂ ಪುರುಷರೊಂದಿಗೆ ನರ್ತಿಸುತ್ತಾರೆ. ಇದಕ್ಕೆ ಹಾಡುಗಾರಿಕೆ ಇರುವುದಿಲ್ಲ. ಆಫ್ರಿಕಾ ಖಂಡದ ಘಾನ - ದೇಶದ ಪುರುಷರು ಕೋಲಾಟಕ್ಕೆ ಎರಡು ಕೋಲನ್ನೂ ಉಪಯೋಗಿಸಿ ಮದ್ದಲೆಯ ಲಯಕ್ಕನುಸಾರವಾಗಿ ಕುಣಿಯುತ್ತಾ ಅದೇ ಲಯಕ್ಕೆ ತಮ್ಮ ಉಚ್ಚವಾದ ಕಂಠದಲ್ಲಿ ತಮ್ಮ ಜನಪದ ಮಾತುಗಳಲ್ಲಿ ಉಚ್ಚವಾಗಿ ಕೂಗುತ್ತಿರುತ್ತಾರೆ.

No part of this publication is allowed for copying or reproducing. Copyright protected. Copyright infringement is punishable offence.

No part of this publication is allowed for copying or reproducing. Copyright protected.
Copyright infringement is punishable offence.



The Old Plantation, a watercolour painting from the 1780s, showing a slave performing a stick dance on a South Carolina plantation.

ಸೌದಿ ಅರೇಬಿಯಾದಲ್ಲಿ ಪುರುಷರು, ಅನೇಕ ಹಾಡುಗಾರರು ಲಯವಾದ್ಯವೃಂದದವರೊಡನೆ ಸೇರಿ ಹಾಡುತ್ತಿರುವಾಗ ಏಕದಂಡದೊಡನೆ ನರ್ತಿಸುತ್ತಾರೆ. ಇದೂ ಸ್ವಲ್ಪ ಮಟ್ಟಿಗೆ ಯುದ್ಧವರಸೆಗಳನ್ನು ಹೋಲುತ್ತದೆ. ಅಂಗೋಲಾದ ಬರ್ಬರರು ಚಿತ್ರವಿಚಿತ್ರವಾದ ಮುಖವಾಡಗಳನ್ನೂ, ವೇಷಗಳನ್ನೂ ಧರಿಸಿ ಜೋರಾಗಿ ಕಿರುಚಿಕೊಳ್ಳುತ್ತ ಲಯವಾದ್ಯ ಹಾಗೂ ಈಗಿನ ಆಧುನಿಕವಾದ ಗಾಳಿವಾದ್ಯದ ಸಂಗೀತದ ಮೇಳವಾದನಕ್ಕೆ ಏಕದಂಡದೊಡನೆ ಬಹಳ ಸೊಗಸಾದ ನೃತ್ಯಮಾಡುತ್ತಾರೆ. ಕೆಮರೂನ್ ನಲ್ಲಿ ಒಂದು ಸ್ವಲ್ಪ ದಪ್ಪನಾದ ಸುಮಾರು ಎರಡೂವರೆ ಅಡಿಗಳಷ್ಟು ಉದ್ದವಾದ ಹಾಗೂ ಇನ್ನೊಂದು ಸುಮಾರು ಒಂದೂಕಾಲು ಅಡಿಗಳಷ್ಟು ಉದ್ದ ಹಾಗೂ ಸ್ವಲ್ಪ ಹೊತ್ತು ಸಪುರವಾಗಿರುವ ಎರಡು ಕೋಲುಗಳನ್ನು ಇಟ್ಟುಕೊಂಡು ಸರ್ಕಸ್ ನವರಂತೆ ಜಗ್ಲಿಂಗ್ ಚಮತ್ಕಾರಗಳನ್ನು ಮಾಡುತ್ತಾ ನರ್ತಿಸುವುದೊಂದು ಬಹಳ ವಿಶೇಷ.



ಕೆಮರೂನಿನ ನ್ಯಂಗ್ ನ್ಯಂಗ್ ನೃತ್ತ.

ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ ( 2321– 2519 ISSN NO)
ಸಂಪುಟ 16 ; ಸಂಚಿಕೆ 1; ಜನವರಿ–ಏಪ್ರಿಲ್ 2022 ;
ಅಂಕಣ- ಭರತಕೌತುಕ

#https://www.robertharding.com/preview/832-381555/stick-dance-performed-tribal-people-yap-island-caroline/



#.. The Magic Of Botswana's Bushmen | Rhino Africa

ಶ್ರೀಲಂಕಾದ ಕೋಲಾಟವು ಉತ್ತರ ಭಾರತದ ಕೋಲಾಟವನ್ನು ಬಹಳವಾಗಿ ಹೋಲುತ್ತದೆ. ಬಹುಶಃ ಇದಕ್ಕೆ ಕಾರಣ ಈ ದೇಶವೂ ಪ್ರಾಚೀನದಲ್ಲಿ ಬೃಹದ್ಭಾರತದಲ್ಲಿ ಸೇರಿದ್ದರಿಂದಲೂ ಬಹಳ ಹಿಂದೆಯೇ ಭಾರತದಿಂದ ಅಲ್ಲಿಗೆ ವಲಸೆ ಹೋಗಿ ನೆಲೆಸಿದ ಜನರಿಂದಾಗಿಯೂ ಇರಬಹುದು. ಅಲ್ಲಿ ಲೀ ಕೇಳಿ, ಪೆರಹೆರ ಇತ್ಯಾದಿ ಕೋಲಾಟವಿಧಗಳಿವೆ. ಮೋರಿಸ್ ನೃತ್ಯವು ಇಂಗ್ಲಿಷ್ ಜನಪದ ನೃತ್ಯವಾಗಿದ್ದು ಅದು ಕೆಲವೊಮ್ಮೆ ಕೋಲುಗಳು, ಕರವಸ್ತ್ರಗಳು ಉದ್ದನೆಯ ಕತ್ತಿಗಳನ್ನು ಹಿಡಿದು ಮಾಡುವಂತಹದಾಗಿರುತ್ತವೆ. ಇಟಲಿಯಲ್ಲೂ ಇಂತಹ ಕೆಲವೊಂದು ನೃತ್ಯಗಳು ಕಂಡುಬರುತ್ತದೆ. ಬೋಟ್ಸ್ವಾನದ ಕಲಹರಿಯ ಮರಳುಗಾಡಿನ ನಾರೋ ಆದಿವಾಸಿಗಳು ದ್ವಿದಂಡಗಳನ್ನೂ (ಎರಡು ಕೋಲುಗಳನ್ನೂ) ಉಪಯೋಗಿಸಿ ನರ್ತಿಸುತ್ತಾರೆ.

ಟಾನ್ಜೇನಿಯಾದ ಕೊಂಡುಸೀ ಆದಿವಾಸಿಗಳು ನರ್ತನ ಮಾಡುವ ಏಕದಂಡದ ಕೋಲಾಟದ ಚಿತ್ರವು ಆ ದೇಶದ ಗುಹೆಗಳಲ್ಲಿ ರೇಖಾಚಿತ್ರಗಳಲ್ಲಿ ಬಿಡಿಸಿದೆ! ಇವು 25000 ವರ್ಷಗಳಿಗಿಂತ ಹಳೆಯದು ಎಂದು ಅಲ್ಲಿನ ಇತಿಹಾಸ ತಜ್ಞರು ಹೇಳುತ್ತಾರೆ! ಫಿನ್‌ಲ್ಯಾಂಡ್ ನ ಕೋಲಾಟದ ಸಂಗೀತವೂ ನರ್ತನವೂ ಬಹು ಸೊಗಸಿದೆ. ಟರ್ಕಿಯ ಚೊಕ್ ಟಾ ಕೋಲಾಟಕ್ಕೆ ಹಾಡುಗಾರಿಕೆ ವಾದ್ಯಗಳೆರಡೂ ಇವೆ. ಅಮೇರಿಕದ ಸ್ಥಳೀಯ (ರೆಡ್) ಇಂಡಿಯನ್ನರ ನೃತ್ಯದ ಕೋಲುಗಳಲ್ಲಿ 89 ಬಗೆಗಳಿವೆ! ಇವುಗಳು ವಿವಿಧ ರೀತಿಯಲ್ಲಿ ಅಲಂಕರಣಗೊಂಡು ಒಂದಕ್ಕಿಂತ ಇನ್ನೊಂದು ಅತ್ಯಂತ ಸುಂದರವಾಗಿದ್ದು ವಿವಿಧ ಕೋಲಾಟಗಳಿಗೆ ಪ್ರಯೋಗವಾಗುತ್ತವೆ. ಹೀಗೆ ಪ್ರಪಂಚದ ಹೆಚ್ಚಿನ ದೇಶಗಳಲ್ಲಿ ಬಹಳ ಪ್ರಾಚೀನದಿಂದಲೇ ಕೋಲಾಟವು ಜನಜೀವನದ, ಸಾಂಸ್ಕೃತಿಕ, ಧಾರ್ಮಿಕ ಆಚರಣೆಯ ಅಂಗವಾಗಿ ಹಾಸುಹೊಕ್ಕಾಗಿದೆ.

#.. Why The Native American Dance Stick Is Important. - Mission Del Rey Southwest
#.. 89 Dance stick ideas | native american art, native american, native american dance
#.. Dandiya Raas - Dandiya Raas Gujarat, Dandia Dance Gujarat India

No part of this publication is allowed for copying or reproducing. Copyright protected. Copyright infringement is punishable offence.

ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ ( 2321– 2519 ISSN NO)

# ಸಂಪುಟ 16 ; ಸಂಚಿಕೆ 1; ಜನವರಿ–ಏಪ್ರಿಲ್ 2022 ;

**ಅಂಕಣ- ಭರತಕೌತುಕ**

#.. [Bamboo dance to rhythmic beats in India - YouTube]

**<u>ಭಾರತೀಯ ಕೋಲಾಟಗಳು</u>** —

ಭಾರತದಲ್ಲಿ ಮಹಾರಾಷ್ಟ್ರ, ಕರ್ನಾಟಕ, ಆಂಧ್ರ ಪ್ರದೇಶಗಳಲ್ಲಿ ಕೋಲಾಟವು ಬಹಳವಾದ ಪ್ರಸಿದ್ಧಿಯನ್ನು ಪಡೆದಿದೆ. ಸಂಯುಕ್ತ ಪ್ರಾಂತದಲ್ಲಿ ಆಹಿರ್ ಚಮ್ಮಾರ್ ಜನರ ನೌಟಂಕಿ, ರಾಸ್, ಹೋಳಿ, ಎಂಬ ಕುಣಿತಗಳೂ, ಹಾಗೆಯೇ ಗುಜರಾತಿನ ಗರ್ಭಾ ನೃತ್ಯವು ಕೃಷ್ಣನ ರಾಸ ಕ್ರೀಡೆಯನ್ನು ಅನುಸರಿಸುವಂತಹುದು.

ಪಂಜಾಬಿನ ದಂಡಿಯಾ ದೇಸಿ,ಸ್ವಾತಂತ್ರ್ಯಾನಂತರ ಪಾಕಿಸ್ತಾನಕ್ಕೆ ಸೇರಿದ ಪಂಜಾಬಿನ ಗಟ್ಕಾ ಢೋಲ್ ದಂಡಿಯಾನ್, ಹರಿಯಾಣದ ರಾಸ ಲೀಲಾ, ಇತ್ಯಾದಿಗಳು ಭಾರತ ದೇಶದ ಸಮಸ್ತ ಭಾಗದಲ್ಲಿಯೂ ಪಂಡಿತರಿಗೂ ಪಾಮರರಿಗೂ ಪ್ರಿಯವಾದ ಕೋಲಾಟ ಮಾತ್ರವಲ್ಲದೆ ಇನ್ನೂ ಅನೇಕ ನರ್ತನ ವಿಧಾನಗಳು ಕಂಡುಬರುತ್ತವೆ. ಇವುಗಳಲ್ಲಿ ಅನೇಕ ನೃತ್ಯ ಪ್ರಕಾರಗಳಿಗೆ ರಾಮಾಯಣ ಮಹಾಭಾರತ ಕಾಲದವರೆಗೂ ಇತಿಹಾಸವನ್ನು ಹೇಳುತ್ತಾರೆ. ಹಾಗೆಯೇ ದೆಹಲಿಯ ದಂಡಿಯಾರಾಸ್, ಕೇರಳದ ಕೋಲ್ ಕಳಿ, ಗೋವಾದ ಟೋನ್ಯಾಮೆಲ್, ಉತ್ತರ ಪ್ರದೇಶದ ಆಹಿರ್ (ಗೋವಳರು) ಜನಾಂಗದ ದಿವಾಲಿ, ಪೈದಂಡ, ಸಾಯಿರಾ, ರಾಜಾಸ್ಥಾನದ ಗೈರ್ ಇಕ್ತಾಲೀ (ಇಕ್ ತಾಲೀ ಎನ್ನುವುದು ಸಂಗೀತಶಾಸ್ತ್ರವು ಹೇಳುವ ಏಕತಾಲೀ ಪ್ರಬಂಧ ಹಾಗೂ ತಾಳ. ಇದರ ಅಂಗವು ಒಂದು ದ್ರುತ ಮಾತ್ರವಿತ್ತು), ತಮಿಳುನಾಡಿನ ಕಳಿ ಆಟ್ಟಂ, ಕೋಲಾಟ್ಟಂ, ಮಹಾರಾಷ್ಟ್ರದ ಕಲ, ಗುಜರಾತ್ ನ ದಂಡರಾಸಕ, ರಾಸ ಮತ್ತು ಗರ್ಬಾ, ಪಂಜಾಬಿನ ದಾಂಕಾರ, ಕರ್ನಾಟಕದ ಕೋಲಾಟ, ಜಮ್ಮು ಕಾಶ್ಮೀರದ ಡೋಗ್ರೀ ಭಾಂಗ್ರಾ, ಬಿಹಾರದ ಝೂರ್ನೀ, ಹರಿಯಾಣದ ಸಾಂಗ್ ಮತ್ತು ರಾಸಲೀಲಾ, ವಂಗದೇಶದ ಕಾಟಿನಾಚ್, ಆಂಧ್ರಪ್ರದೇಶ ಹಾಗೂ ತೆಲಂಗಾಣದ ಕೋಲಾಟ್ಟಂ, ಕೋಲ್ ಕೋಲನ್ನಲು ಮತ್ತು ಕೋಲನ್ನಲು, ಒರಿಸ್ಸಾ ರಾಜ್ಯದ ದಾರುವ ಖೊಂಡ್, ಅಸ್ಸಾಂನ ಬಿಹು, ಹಿಮಾಚಲ ಪ್ರದೇಶದ ದಂಡರಾಸ್, ಮಣಿಪುರದ ಜಾಗೊಯ್, ಸಿಕ್ಕಿಂನ ಲೊಯಂಬ, ಛತ್ತೀಸಗಢದ ಜ್ವಿರ್ಲಿಟಿ, ಅರುಣಾಚಲ ಪ್ರದೇಶ ಹಾಗೂ ತ್ರಿಪುರಾ ರಾಜ್ಯಗಳ ಸಯಿಲ (ಇದಕ್ಕೆ ದಂಡ ನಾಚ್ ಅಥವಾ ದಂಡರ್ ಪತೆ ಎಂಬ ಹೆಸರುಗಳೂ ಇವೆ), ಪಾಂಡಿಚೆರಿಯ ಚಿಂದು ಎಂಬ ಹೆಸರುಗಳನ್ನು ಹೊಂದಿ ಭಾರತ ದೇಶದ ಸಮಸ್ತ ಭಾಗದಲ್ಲಿಯೂ ಪಂಡಿತರಿಗೂ ಪಾಮರರಿಗೂ ಪ್ರಿಯವಾದ ಅನೇಕ ವಿಧಗಳ ಕೋಲಾಟ ನರ್ತನ ವಿಧಾನಗಳು ಕಂಡುಬರುತ್ತವೆ.

No part of this publication is allowed for copying or reproducing. Copyright protected. Copyright infringement is punishable offence.

Copyright reserved

ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ ( 2321– 2519 ISSN NO)

ಸಂಪುಟ 16 ; ಸಂಚಿಕೆ 1; ಜನವರಿ–ಏಪ್ರಿಲ್ 2022 ;

ಅಂಕಣ- ಭರತಕೌತುಕ



ರಾಜಸ್ತಾನದ ಗೈರ್ ನೃತ್ತ

ಮಿಜ್ಹೋರಾಮಿನ ಬೆಹ್ ಡೆನ್ ಖೇಮ್, ಪ್ನಾರ್, ಜೈನ್ಟಿಯಾಸ್ ನೃತ್ಯಗಳ ಕೋಲುಗಳು ಪ್ಲೇಗ್ ನಂತಹ ಕೆಟ್ಟ ರೋಗಮಾರಿಗಳನ್ನೂ, ಅನೇಕಾನೇಕ ದುಷ್ಟಶಕ್ತಿಗಳನ್ನೂ ಓಡಿಸುತ್ತದೆಂದು ನಂಬಿ ಪುರುಷರು ಕೋಲಾಟವಾಡುತ್ತ ನರ್ತಿಸುತ್ತಾರೆ. ಈ ಮೊದಲೇ ಉಲ್ಲೇಖಿಸಿದಂತೆ ಡೋಲಿನಂತಹ ಕೆಲವು ಲಯವಾದ್ಯಗಳೂ ಎಲ್ಲ ಕಡೆಗಳಲ್ಲಿಯೂ , ಕೆಲವೊಮ್ಮೆ ಅಪರೂಪವಾಗಿ ಕೊಳಲೂ, ಹಾಡುಗಾರಿಕೆಯೂ ಇರುತ್ತವೆ. ನರ್ತನಕಾರರು ಲಯವಾದ್ಯಗಳ ವಿವಿಧ ರೀತಿಯ ಪಾಟಾಕ್ಷರಗಳಿಗೆ, ಲಯಗತಿಗೆ ಪರಸ್ಪರವಾಗಿ ಕೋಲುಗಳನ್ನು ಬಡಿಯುತ್ತ, ಕಾಲುಗಳಲ್ಲಿ ಬೇರೆ ಬೇರೆ ಹೆಜ್ಜೆಗಳನ್ನು ಹಾಕುತ್ತ, ಮಂಡಲಗಳನ್ನು ರಚಿಸುತ್ತ ನರ್ತಿಸುತ್ತಾರೆ. ಪುರುಷರ ಕೋಲಾಟವು ಬಹುಪಾಲು ಯುದ್ಧದ ಹೋರಾಟದಲ್ಲಿ ಮಾಡಬಹುದಾದ ಕತ್ತಿವರಸೆ, ದಂಡದ ವರಸೆಗಳನ್ನು ನೆನಪಿಗೆ ತರುತ್ತವೆ. ಸ್ತ್ರೀಯರ ಕೋಲಾಟವೂ ಸೌಮ್ಯವಾಗಿದ್ದರೂ ಲಯವೈವಿಧ್ಯತೆಯಲ್ಲಿಯೂ, ದೇಹದ ಬಳುಕು, ಬಾಗುವಿಕೆಯಲ್ಲಿ ಪರಿಶ್ರಮವನ್ನು ಹೊಂದಿ ಲಯದಲ್ಲಿಯೂ ಮಂಡಲಗಳನ್ನು ರಚಿಸುವುದರಲ್ಲಿಯೂ ಅಪಾರವಾದ ಪರಿಣತಿಯನ್ನು ಗಳಿಸಿರುತ್ತಾರೆ. ಉತ್ತರ ಭಾರತದಲ್ಲಿ ಆದಿವಾಸಿಗಳೂ, ಗುಡ್ಡಗಾಡು ಜನಾಂಗದವರೂ ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಪರಂಪರಾಗತವಾಗಿ ಬಂದ ನೃತ್ಯಗಳನ್ನು ಕಲಿಸುತ್ತಾರೆ. ಅವರಿಗದು ಅತ್ಯಗತ್ಯವಿರುವ ವಿದ್ಯೆ ಹಾಗೂ ಪರಂಪರಾನುಗತವಾಗಿ ಬಂದ ಹೆಮ್ಮೆಯ ಸಂಗತಿಯಾಗಿದೆ.

ಕರ್ನಾಟಕದಲ್ಲಿರುವ ಕೋಲಾಟಗಳ ಹಿನ್ನೆಲೆ, ಕೋಲಾಟವನ್ನು ಆಡುವ ಸಂದರ್ಭಗಳು, ಕೋಲುಪದ, ಕೋಲು ತರುವ ಮತ್ತು ಬಿಡುವ ಆಚರಣೆ, ವೇಷಭೂಷಣ, ಕೋಲಾಟದ ಸಂದರ್ಭದಲ್ಲಿ ನುಡಿಸುವ ವಾದ್ಯಗಳು, ಕೋಲಾಟದ ವೈವಿಧ್ಯತೆ ಹಾಗೂ ವಿಧಗಳು, ಅದರ ವಿವಿಧ ಗತಿಗಳು, ಅಪರೂಪವಾದ ಕೊರವಂಜಿ ಕೋಲಾಟ, ಜಡೆ ಕೋಲಾಟಗಳು ಹಾಗೂ ಇವುಗಳ ಪದಗಳು, ಉತ್ತರ ಕನ್ನಡ ಜಿಲ್ಲೆಯ ಸುಮಾರು ಇಪ್ಪತ್ತೆಂಟು- ಮೂವತ್ತು ಬಗೆಯ ಕೋಲಾಟದ ವಿಧಗಳು, ಇತ್ಯಾದಿಗಳ ವಿವರಗಳನ್ನು ವಿಕಿಪಿಡಿಯಾವು ಗೊ.ರು. ಚೆನ್ನಬಸಪ್ಪನವರವ 'ಕರ್ನಾಟಕದ ಜನಪದ ಕಲೆಗಳು( ಕನ್ನಡ ಸಾಹಿತ್ಯ ಪರಿಷತ್ತು ,1977 ರ ಪ್ರಕಟಣೆ) ಹಾಗೂ ಹಿ.ಚಿ. ಬೋರಲಿಂಗಯ್ಯನವರ ಕರ್ನಾಟಕ ಜನಪದ ಕಲೆಗಳ ಕೋಶ

No part of this publication is allowed for copying or reproducing. Copyright protected. Copyright infringement is punishable offence.

(ಕನ್ನಡ ವಿಶ್ವವಿದ್ಯಾಲಯ , ಹಂಪಿ , 1996 ರ ಪ್ರಕಟಣೆ )ಗಳನ್ನು ಆಧರಿಸಿ ಸವಿವರವಾಗಿ ಅನೇಕ ಅಮೂಲ್ಯವಾದ ಕೋಲಾಟದ ಹಾಡುಗಳೊಡನೆ ಪ್ರಕಟಿಸಿದೆ. ಅದನ್ನು ಇಲ್ಲಿ ಪುನಃ ವಿವರಿಸುವುದಿಲ್ಲ.

ಭಾರತದ ಕೋಲಾಟಗಳ ಅಧ್ಯಯನಕ್ಕೆ ರಾಸಲೀಲೆಯನ್ನೂ ಸಂಗೀತ ಶಾಸ್ತ್ರದಲ್ಲಿ ಬಗ್ಗೆ ಅದರ ಬಗ್ಗೆ ಹೇಳಿರುವ ಸಂಗತಿಗಳ ಬಗ್ಗೆಯೂ ಸ್ಥೂಲವಾಗಿಯಾಗಿಯಾದರೂ ತಿಳಿದುಕೊಳ್ಳಬೇಕಾದ ಅಗತ್ಯವಿದೆ.(ಪಾರಿಭಾಷಿಕ ಶಬ್ದಗಳ ಅರ್ಥವನ್ನು ಅಲ್ಲಲ್ಲಿಯೇ ಕಂಸಗಳಲ್ಲಿ ಕೊಟ್ಟಿದೆ) ಈ ಸಂದರ್ಭದಲ್ಲಿ ಜನಪದ ನೃತ್ಯ ಹಾಗೂ ನಾಟಕಗಳಿಗೆ ಆಟ, ಕ್ರೀಡೆ , ಕೇಳಿ, ಕೇಲಿಕಾ, ಕಳಿ ಇತ್ಯಾದಿ ಆಟ ಎಂದು ಅರ್ಥೈಸುವ ಶಬ್ದಗಳೇ ಪ್ರಯೋಗವಾಗುವುದು ಆಸಕ್ತಿಯನ್ನುಂಟು ಮಾಡುತ್ತದೆ.

**<u>ಸಂಗೀತಶಾಸ್ತ್ರಗ್ರಂಥಗಳಲ್ಲಿ ಕೋಲಾಟ</u>** —

ಹದಿನಾರನೇ ಶತಮಾನದಲ್ಲಿದ್ದ ಕರ್ನಾಟಕದವನೇ ಆಗಿದ್ದ ಪುಂಡರೀಕ ವಿಠಲನು ದೆಹಲಿಯಲ್ಲಿ ಚಕ್ರವರ್ತಿಯಾಗಿದ್ದ ಅಕಬರನ ಆಸ್ಥಾನದಲ್ಲಿದ್ದು ಆತನ ಅಪೇಕ್ಷೆಯಂತೆ ಅನೇಕ ಗ್ರಂಥಗಳನ್ನು ರಚಿಸಿದನು. ಅಕಬರೀಯ ಕಾಲಿದಾಸನೆಂದೇ ಪ್ರಖ್ಯಾತನಾಗಿದ್ದ ಆತನು ತನ್ನ ನರ್ತನ ನಿರ್ಣಯದ ಆರಂಭ ಶ್ಲೋಕದಲ್ಲಿ ಶ್ರೀಕೃಷ್ಣನನ್ನು ಸ್ತುತಿಸುವಾಗ , ಈಶ್ವರನೂ ಯತಿಗಳಿಗೆ ಮೋಕ್ಷವನ್ನು (ಲಯ)ವನ್ನು ಅನುಗ್ರಹಿಸುವವನೂ, ಬೇರೆ ಬೇರೆ ವರ್ಣಗಳಿಗೆ ಆಶ್ರಯನಾಗಿರುವವನೂ, ರಾಸಕ್ರೀಡಾಮಗ್ನನೂ ಆಗಿರುವ ಶ್ರೀಕೃಷ್ಣನನ್ನು ನಮಸ್ಕರಿಸಿ ನರ್ತನನಿರ್ಣಯವನ್ನು ನಿರೂಪಿಸುತ್ತೇನೆ ಎಂದು ಕೃಷ್ಣಪರವಾದ ಹಾಗೂ ನರ್ತನಪರವಾದ ಆಂಶಿಕಶ್ಲೇಷೆಯನ್ನು ಉದ್ದೇಶಿಸಿ ಸ್ತುತಿಸಿರುವಂತೆ ತೋರುತ್ತದೆ: ಕೃಷ್ಣನು ಜಗದೀಶ್ವರ ; ಮುಮುಕ್ಷುಗಳಾದ ಯತಿಗಳಿಂದಲೂ ಅವರಿಗೆ ಅನುಗ್ರಹ ರೂಪವಾದ ಲಯಯೋಗದಿಂದಲೂ ಕೂಡಿದ್ದಾನೆ. ಬ್ರಹ್ಮಕ್ಷತ್ರಿಯಾದಿ ಸಕಲವರ್ಣಗಳೂ — ಉಪಲಕ್ಷಣಗಳಿಂದ ಸಕಲ ಜಗತ್ತೂ —ಅವನನ್ನೇ ಆಶ್ರಯಿಸುತ್ತವೆ. ಅಂತೆಯೆ ಅವನು ರಾಸಕ್ರೀಡೆಯ ನಿಮಿತ್ತವಾದ ವಿವಿಧ ಯತಿಗಳಿಂದಲೂ ಲಯಗಳಿಂದಲೂ ಕೂಡಿದ್ದಾನೆ ;ಮೈಬಣ್ಣ, ನವಿಲುಗರಿ, ಪೀತಾಂಬರ, ಚಿಗುರಿನಂತಹ ಬೆರಳುಗಳು ಮುಂತಾಗಿ ವಿವಿಧಮಯನೂ ಆಗಿದ್ದಾನೆ. —

"ಈಶಂ ಯತಿಲಯೋಪೇತಂ ವರ್ಣಭೇದೈರುಪಾಶ್ರಿತಮ್ ।
ರಾಸಕ್ರೀಡಾಮಯಂ ನತ್ವಾ ವಕ್ಷ್ಯೇ ನರ್ತನನಿರ್ಣಯಮ್ ॥"

ಎಂದು ಆರಂಭಿಸಿದ್ದಾನೆ. ಆಭೀರಿ ರಾಗದೇವತೆಯನ್ನು ತನ್ನ ರಾಗಮಾಲಾ ಗ್ರಂಥದಲ್ಲಿ ವರ್ಣಿಸುವಾಗಲೂ ರಾಸಲೀಲೆಯನ್ನು ಉಲ್ಲೇಖಿಸಿದ್ದಾನೆ . —

No part of this publication is allowed for copying or reproducing. Copyright protected. Copyright infringement is punishable offence.

ಆಭೀರಿಯಲ್ಲಿ ಚಂದ್ರ (1),ಎರಡು, ಮೂರು ಗತಿಗಳ ಗರಿನಿ - ಗಳಿವೆ ; ಸ—ತ್ರಯ, ಈ (ರಾಗಿಣಿಯು) ಹೊಳಪುಗಣ್ಣಿನವಳು, ಪ್ರಗಲ್ಭಾಸ್ತ್ರೀ. (ಯೌವನದಿಂದ ಕುರುಡಾದವಳು, ಕಾಮದಿಂದ ಹುಚ್ಚು ಹಿಡಿದಂತಾದವಳು, ರತಿಯ ಪ್ರಾರಂಭದಲ್ಲಿಯೇ ಆನಂದದಿಂದ ನಾಯಕನ ಅಂಗದಲ್ಲಿ ಕರಗಿಹೋದಂತೆ ಚೇತನರಹಿತಳಾಗುವವಳು ಪ್ರಗಲ್ಭಾ. ಪ್ರಗಲ್ಭಾ ನಾಯಿಕೆಯರಲ್ಲೂ ಪುನಃ ಭೇದಗಳು - ಅದರಲ್ಲಿಯೂ ಒಳಭೇದಗಳು ಇವೆ), ಶ್ಯಾಮವರ್ಣದವಳು, ಮೃದುಭಾಷಿ, ಜಡೆಯನ್ನೆತ್ತಿ ತಲೆಯ ಮೇಲೆ ಕಟ್ಟಿದೆ, ಕೋಮಲೆ, ನೀಲಿಯ (ಅಥವಾ ಕಪ್ಪು ಅಥವಾ ಕಡುಹಸಿರು) ಬಟ್ಟೆಯನ್ನು ಧರಿಸಿದ್ದಾಳೆ, ಮೃದುವಾದ ಕಂಠದಲ್ಲಿ ಹವಳದ ಪಙ್ತಿಯು ಶೋಭಿಸುತ್ತದೆ, ಕಿವಿಗಳಲ್ಲಿ ತಾಟಂಕಗಳಿವೆ, ಸಾಯಂಕಾಲದಲ್ಲಿ (ಇದೇ ಗಾನಾರ್ಹಸಮಯವೂ ಹೌದು) ರಾಸದಂಡ ಕ್ರೀಡೆಯಿಂದಲೂ ದುಂಬಿಗಳ ಝೇಂಕಾರದಿಂದಲೂ ರಮಿಸುತ್ತಾಳೆ (ಸಂಜೆಯ ವೇಳೆ ಸಖಿಯರು ದಂಡರಾಸವನ್ನಾಡುತ್ತಿದ್ದಾಗ ತಾನು ಕಾಮನಾಟವನ್ನು ಆಡುತ್ತಿದ್ದು ಅದರ ಶಬ್ದದೊಡನೆ ಕೋಲಾಟದ ಸುರತ ಧ್ವನಿಯನ್ನೂ ಸೇರಿಸುತ್ತಾಳೆ ಎಂದು ಚಿತ್ರಿಸಿಕೊಳ್ಳಬಹುದು).—

"ಚಂದ್ರದ್ವಿಸ್ತ್ರಿರ್ಗತಾಃ ಸ್ಯುರ್ಗರಿನಯ ಇಹ ಸುಸ್ನಿಗ್ಧನೇತ್ರಾ ಪ್ರಗಲ್ಭಾ
ಶ್ಯಾಮಾ ಽಽಭೀರೀ ತ್ರಿಷಡ್ಜಾ ಮೃದುವಚನಪರಾ ಮೂರ್ಧ್ನಿರ್ವೇಣೀಂ ದಧಾನಾ ।
ಮೃದ್ವಂಗೀ ನೀಲವಸ್ತ್ರಾ ಮೃದುಗಲವಿಲಸದ್ ವಿದ್ರುಮಾಲಿಶ್ಚ ಕರ್ಣೇ
ತಾಟಂಕಾಢ್ಯಾ ಹಿ ಸಾಯಂ ರಸಪತಿ ನಿನದೈಃ ರಾಸದಂಡೈ ರಮಂತೀ ॥"

ನರ್ತನನಿರ್ಣಯದ ನಾಲ್ಕನೆಯ ಪ್ರಕರಣದಲ್ಲಿ ನರ್ತಕ( ನೃತ್ತ)ವನ್ನು ಹೇಳುವ ಸಂದರ್ಭದಲ್ಲಿ ನಾನಾ ದೇಶಗಳ ನಾನಾ ಜನಗಳನ್ನು ಆಶ್ರಯಿಸಿ ಪ್ರಸಿದ್ಧವಾಗಿರುವ ದೇಶಿ ನೃತ್ಯಗಳು ಕೊನೆಯಿಲ್ಲದಷ್ಟಿದೆ, ಅವುಗಳನ್ನು ಹೇಗೆ ಮಾಡಿದರೆ ಸುಂದರವಾಗಿ ರುಚಿಸುತ್ತವೋ ಹಾಗೆಯೇ ನೃತ್ಯವಿದ್ಯಾವಿಶಾರದರು ಮಾಡಬೇಕು. ಚಾರಿಗಳು ನೆಲೆಸಿರುವ, ಸೌಂದರ್ಯದ ಅಧಿಷ್ಠಾನವಿರುವ ನೃತ್ಯವೇ ನೃತ್ಯ ; ಉಳಿದದ್ದು ಅದರ ಅಣಕ - ಎನ್ನುತ್ತಾನೆ. ದಂಡರಾಸ, ಹಾಗೂ ರಾಸದ ಲಕ್ಷಣವನ್ನು ಆತನು ಹೀಗೆ ನೀಡುತ್ತಾನೆ : ಮುರಜವೇ ಮೊದಲಾದ ವಾದ್ಯಗಳನ್ನು ಆಯಾ ವಾದಕರು ನುಡಿಸುತ್ತಿರುವಾಗ ದೊರೆಗಳ ಕುತೂಹಲವನ್ನು ತೃಪ್ತಿ ಪಡಿಸುವುದಕ್ಕಾಗಿ, ವಸಂತವೇ ಮೊದಲಾದ ಉತ್ಸವಗಳಲ್ಲಿ ಕ್ರಮವಾಗಿ ನಾಲ್ಕು, ಎಂಟು, ಹದಿನಾರು ಅಥವಾ ಮೂವತ್ತೆರಡು ಅಥವಾ ಅರವತ್ತನಾಲ್ಕು ಪಾತ್ರಗಳು ಒಟ್ಟುಗೂಡಿ ಅಥವಾ (ಮತ್ತು) ಅಗಲಿ ತಮ್ಮ ಕಮಲದಂತಹ ಕೈಗಳಲ್ಲಿ ಕೋಲುಗಳನ್ನು ಹಿಡಿದು ನರ್ತಿಸುತ್ತಾರೆ ; ಇವು ಹೆಬ್ಬೆರಳಿನಷ್ಟು ದಪ್ಪವೂ ಹದಿನಾಲ್ಕು ಅಂಗುಲ ಉದ್ದವೂ, ಕೊನೆಯಲ್ಲಿ ಚಿನ್ನವೇ ಮೊದಲಾದ ಲೋಹಗಳ ಕಟ್ಟುಗಳನ್ನುಳ್ಳವೂ, ನೇರವೂ, ದುಂಡನೆಯವೂ, ಧೃಢವೂ, ಬಣ್ಣಗಳಲ್ಲಿ ಚಿತ್ರಿತವೂ, ಗಂಟಿಲ್ಲದೆಯೂ ಹಾಗೆಯೇ ನುಣುಪೂ ಆಗಿರುತ್ತವೆ. ಅಥವಾ ಆಯಾ ದೇಶಪದ್ಧತಿಗೆ ಅನುಸಾರವಾಗಿ ಹಿಡಿದು, ಅಥವಾ ಬಟ್ಟೆಯ ಅಂಚುಪಟ್ಟಿಗಳನ್ನು ಕಟ್ಟಿದ ಕೋಲುಗಳನ್ನು ಅಥವಾ ಚೂರಿಗಳನ್ನು ಕಟ್ಟಿದ ಕೋಲುಗಳನ್ನು ಹಿಡಿದು ನಾಲ್ಕು ಅಥವಾ ಐದು ಹೊಡೆತಗಳಿಂದ ಅಥವಾ ಆರು ಏಟುಗಳಿಂದ ಬೇರೆ ಬೇರೆ ರೀತಿಯಾಗಿ ಶಬ್ದಮಾಡುವ ಹೊಡೆತಗಳಿಂದ, ಆಮೇಲೆ

Copyright preserved

ಸುಂದರವಾದ ಚಾರೀ(ಎಲ್ಲಿ ಪಾದದ, ಮೊಳಕಾಲಿನ, ತೊಡೆಯ, ಅಂತೆಯೇ ಸೊಂಟದ ಕ್ರಿಯೆಗಳನ್ನು ಏಕಕಾಲದಲ್ಲಿ ಮಾಡಲಾಗುವುದೋ ಅದು ಚಾರೀ ಎಂದು ಪ್ರಸಿದ್ಧವಾಗಿದೆ. ಚಾರಿಗೆ ವ್ಯಾಯಾಮವೆಂಬ ಹೆಸರೂ ಇದೆ. ) ಭ್ರಮರಿ (ಅತಿಕ್ರಾಂತದಲ್ಲಿ ಪಾದವನ್ನು ಚಲಿಸಿ ಟೊಂಕ {ಬೆನ್ನೆಲುಬಿನ ಕೆಳಗಿನ ಪ್ರದೇಶ ; ಎರಡು ಪಿರ್ರೆಗಳೂ ಬೆನ್ನೂ ಸಂಧಿಸುವ ಜಾಗ ; ಸೊಂಟದಿಂದ ಮೇಲಿನಭಾಗವನ್ನು ಪೂರ್ತಿಯಾಗಿ ಪಕ್ಕಕ್ಕೆ ತಿರುಗಿಸಬೇಕು ಎಂದು ತಾತ್ಪರ್ಯ} ವನ್ನು ಪೂರ್ತಿಯಾಗಿ ತಿರುಗಿಸಬೇಕು ; ಎರಡನೆಯ ಅಂಗಾಲಿನಿಂದ ವರ್ತುಲಾಕಾರವಾಗಿ ತಿರುಗಿಸಬೇಕು ; ಇದು ಭ್ರಮರಿ) ಗಳಿಂದಲೂ ಎಡ ಪಕ್ಷಗಳು - ಬಲಗಳಿಂದ ಮತ್ತೆ ಮತ್ತೆ ಮಂಡಲಾಕಾರದಲ್ಲಿ ಸೇರಿ, ಹಾಡು, ತಾಲ, ಲಯಗಳನ್ನು ಅನುಸರಿಸಿಕೊಂಡು ನರ್ತಿಸಿದರೆ ಆಗ ಜನರಿಗೆ ಮನೋಹರವಾದ ಅದು ದಂಡರಾಸವೆಂದು ವಿದ್ವಾಂಸರು ಹೇಳುತ್ತಾರೆ. ದಂಡವಿಲ್ಲದೆ ಮಾಡಿದ ಇದೇ ನೃತ್ಯವು ರಾಸನೃತ್ಯವಾಗುತ್ತದೆ, ಎನ್ನುತ್ತಾನೆ.(ಉದ್ಧೃತಿ - ರಾ ಸತ್ಯನಾರಾಯಣರವರ ಪುಂಡರೀಕ ಮಾಲಾ ಗ್ರಂಥ)

ದಂಡರಾಸವನ್ನು ದಂಡ ಇತ್ಯಾದಿಗಳಿಂದಲೂ ರಾಸವನ್ನು ಕೈಚಪ್ಪಾಳೆಯಿಂದಲೂ ನರ್ತಿಸುತ್ತಾರೆ. ದಂಡರಾಸವೆಂದರೆ ಕೋಲಾಟ. ಈ ಮೊದಲೇ ಹೇಳಿದಂತೆ ಇದು ಭಾರತಾದ್ಯಂತವೂ ರೂಢಿಯಲ್ಲಿರುವ ಜನಪದ ನೃತ್ಯ ಪ್ರಕಾರ. ರಾಸ ಅಥವಾ ರಾಸಕದ ಲಕ್ಷಣಗಳನ್ನು ದಂಡರಾಸಕ್ಕೆ (=ಕೋಲಾಟಕ್ಕೆ) ಅನ್ವಯ ಮಾಡುವುದರಿಂದ ದಂಡರಾಸದ ಲಕ್ಷಣವನ್ನು ಶಾಸ್ತ್ರೀಯವಾಗಿ ಪಡೆಯಬಹುದು.

ಪಂಡರೀಕ ವಿಠ್ಠಲನು ತನ್ನ ನರ್ತನನಿರ್ಣಯದ ಮೊದಲನೆಯ ಪ್ರಕರಣವಾದ ತಾಲಧಾರಿಯಲ್ಲಿ ಪಾಟಚಾಲೀ (=ಶಬ್ದಚಾಲೀ)ಯನ್ನು ವರ್ಣಿಸುವಾಗ ಎಂಟರಿಂದ ಮೊದಲಾಗಿ ಮೂರರಲ್ಲಿ ಮುಗಿಯುವ, ಪರಸ್ಪರ ಸಂವಾದ ವರ್ಣಗಳಿರುವ ಪಾಟವರ್ಣಗಳು (ತಾಲವಾದ್ಯಗಳಲ್ಲಿ ನುಡಿಸಬೇಕಾದ ವಿವಿಧ ಅಕ್ಷರಗಳ ವಿನ್ಯಾಸಗಳ ರೀತಿಗಳು) ಆರುಖಂಡಗಳಿರುತ್ತವೆ, ಇದರಲ್ಲಿ ಒಂದೊಂದರಲ್ಲಿಯೂ ಇಪ್ಪತ್ತೊಂದು ಸಂಖ್ಯೆಯಷ್ಟಿರುವ, ವಿಚಿತ್ರ ವಿನ್ಯಾಸವುಳ್ಳ ವರ್ಣಮಾಲೆಗಳು ನಾನಾ ವಾದ್ಯಗಳಲ್ಲಿ ಪ್ರಸ್ತುತಗೊಂಡು ರಾಸತಾಲದೊಡಗೂಡಿ ಇರುತ್ತವೆ ಎಂದೂ - ಈ ರಾಸ ತಾಲವು ಒಂದು ಲಘುವಿನಿಂದ ಆದಿತಾಲವಾಗುತ್ತದೆ; — 'I' -- ಆದಿ(ರಾಸ), ಈ ಆದಿತಾಲವನ್ನೇ ಲೋಕದಲ್ಲಿ ರಾಸವೆಂದು ಸಹ ಹೇಳುತ್ತಾರೆ, ಎನ್ನುತ್ತಾನೆ. ಈ ರಾಸವು ಈಗಿನ ಏಕತಾಳಕ್ಕೆ ಪರಸ್ಪರವಾಗಿದೆ. ಪಂಡರೀಕ ವಿಠ್ಠಲನು ರಾಸವನ್ನು ನರಹರಿಚಕ್ರವರ್ತಿಯ ಸಂಗೀತಸಾರವನ್ನು ತನ್ನ ಕಾಲದ ರೂಢಿಯಿಂದ ಉದ್ಧರಿಸಿಕೊಂಡು ಸಾಲಗ ಪ್ರಬಂಧಗಳು ಏಳು. ಅವು —ಧ್ರುವ, ಮಂಠ, ಪ್ರತಿಮಂಠ, ನಿಃಸಾರು, ಅಡ್ಡತಾಲ, ರಾಸ, ಏಕತಾಲೀ ಎಂಬುದಾಗಿ ಗಾಯಕ - ಪ್ರಬಂಧದ ಪ್ರಕರಣದಲ್ಲಿ ವಿವರಿಸುತ್ತಾನೆ.

ಪ್ರಾಚೀನ ಸಂಗೀತಶಾಸ್ತ್ರಕಾರರು ವರ್ಣಿಸಿರುವ 75 ಮುಖ್ಯ ಪ್ರಬಂಧಗಳಲ್ಲಿ ಕೆಲವು ಸ್ವನಾಮಕಗಳಾಗಿರುತ್ತಿದ್ದವು ; ಎಂದರೆ ಪ್ರಬಂಧದಲ್ಲಿ ನಿಯುಕ್ತವಾಗಿರುತ್ತಿದ್ದ ತಾಲದ ಹೆಸರೇ ಪ್ರಬಂಧಕ್ಕೂ ಇರುತ್ತಿತ್ತು. ಉದಾಹರಣೆಗೆ ಢೇಂಕೀ, ರಾಸ, ಏಕತಾಲೀ, ವರ್ಣ

No part of this publication is allowed for copying or reproducing. Copyright protected. Copyright infringement is punishable offence.

,ಹಯಲೀಲಾ, ಗಜಲೀಲಾ, ಸಿಂಹಲೀಲಾ, ತ್ರಿಭಂಗೀ ಹಾಗೆಯೇ ಸಾಲಗಸೂಡ ಪ್ರಬಂಧಗಳಲ್ಲಿ (ನಂತರದ ಸೂಳಾದಿಗಳಲ್ಲಿ) ಮಂಠ, ಪ್ರತಿಮಂಠ, ನಿಃಸಾರು, ಠಾಯ , ರಾಸ, ಏಕತಾಲೀಗಳು. ರಾಸಕವೆಂಬ ಪ್ರಬಂಧವನ್ನು ರಾಸ ತಾಳದಲ್ಲಿ, ಹಾಡಬೇಕು. ಇದು ತ್ರಿಧಾತುಕ ಪ್ರಬಂಧ. (ಧಾತುವು ಪ್ರಬಂಧದ ಅವಯವ, ಅದು ಗೇಯವಾದ ಎಂದರೆ ಸ್ವರ - ಲಯಗಳ ಅಂಶ. ಧಾತುವು ನಾಲ್ಕು ವಿಧ. ಗೀತವನ್ನು ಎತ್ತಿಕೊಳ್ಳುವುದರಿಂದ ಉದ್ಗ್ರಾಹವು ಗೀತದ ಮೊದಲಿನಲ್ಲಿರುತ್ತದೆ. ಮೇಲಾಪಕವು ಎರಡನೆಯದು. ಇದು ಉದ್ಗ್ರಾಹ ಮತ್ತು ಧ್ರುವಗಳನ್ನು ಮೇಲನ{=ಕೂಡಿಸು} ಮಾಡುವುದರಿಂದ ಈ ಹೆಸರು ಬಂದಿದೆ. ಧ್ರುವವು ಮೂರನೆಯದು. ಇದು ನಿಯತವಾಗಿ ಇದ್ದೇ ಇರಬೇಕಾದುದರಿಂದಲೂ ಧ್ರುವವಾಗಿ ಮತ್ತೆ ಮತ್ತೆ ಮರುಕಳಿಸುವುದರಿಂದಲೂ ಇದಕ್ಕೆ ಧ್ರುವವೆಂಬ ಹೆಸರು ಬಂದಿದೆ. ಆಭೋಗವು ಗೀತವು ಮುಗಿಯಿತೆಂದು ಸೂಚಿಸುವ ಐದನೆಯ ಭಾಗ. ಧ್ರುವ —ಆಭೋಗಗಳ ನಡುವೆ ಅಂತರವೆಂಬ ಬೇರೆ ಒಂದು ಧಾತುವು ಇದ್ದು ಅದು ಸಾಲಗಸೂಡ (ನಂತರದ ಸುಳಾದಿ)ದಲ್ಲಿರುವ ರೂಪಕಗಳಲ್ಲಿ ಮಾತ್ರ ಈ ಅಂತರವು ಕಂಡುಬರುತ್ತದೆ. ಪ್ರಬಂಧದ ಆರು ಅಂಗಗಳು ಸ್ವರ, ಬಿರುದ ಎಂದರೆ ಹೊಗಳಿಕೆಯ ಮಾತು, ಪದ, ತೇನಕ ಎಂದರೆ ತೇನತೇನ ಎಂಬ ಶಬ್ದಗಳಿಂದ ಹಾಡುವಂತಹವು, ಪಾಟ ಎಂದರೆ ಲಯವಾದ್ಯಗಳಲ್ಲಿ ನುಡಿಸುವ ಅಕ್ಷರಗಳು —ತಾಲಗಳು. ಐದು ವಿಧದ ಜಾತಿಗಳಿಂದ ಹಾಗೂ ಧಾತು—ಅಂಗಗಳಿಂದ ಪ್ರಬಂಧಗಳು ಉಂಟಾಗುತ್ತದೆ. ಆರೂ ಅಂಗಗಳಿಂದ ಮೇದಿನೀ, ಐದರಿಂದ ಆನಂದಿನೀ, ನಾಲ್ಕರಿಂದ ದೀಪನೀ, ಮೂರು ಅಂಗಗಳಿಂದ ಭಾವನೀ, ಎರಡರಿಂದ ತಾರಾವಲೀ ಜಾತಿಗಳಾಗುತ್ತದೆ. ) ತಾಲದ ನಿಯಮವಿರುವುದರಿಂದ ಇದು ನಿರ್ಯುಕ್ತ ; ಪದ, ತಾಲಗಳೆಂಬ ಎರಡು ಅಂಗಗಳಿರುವುದರಿಂದ ಇದು ತಾರಾವಲೀ ಜಾತಿಯದು ಎಂಬ ಲಕ್ಷಣವನ್ನು ರಾಸಕಕ್ಕೆ ನೀಡುತ್ತಾನೆ.(ಉದ್ಧೃತಿ - ರಾ. ಸ., ಪುಂಡರೀಕ ಮಾಲಾ) ಪ್ರಸಿದ್ಧ ಪಿಳ್ಳಾರಿಗೀತೆಯಾದ ಮಲಹರಿ ರಾಗದ ಶ್ರೀಗಣನಾಥ (ಲಂಬೋದರ) ವು ತಾರಾವಲೀ ಜಾತಿಯ ಪ್ರಬಂಧಕ್ಕೆ ಒಂದು ಉದಾಹರಣೆಯಾಗಿದೆ. (ಉ., ರಾ. ಸ., ಕರ್ನಾಟಕಸಂಗೀತವಾಹಿನಿ - ಪಿಳ್ಳಾರಿಗೀತೆಗಳು).

ರಾಸಕಪ್ರಬಂಧಕ್ಕೆ ಗಮಕಗಳು ಹೇರಳವಾಗಿರಬೇಕೇ - ಅಲ್ಪವಾಗಿರಬೇಕೆ? ತಾರಸ್ಥಾನದಲ್ಲಿ ಸಂಚಾರವುಂಟೆ —ಇಲ್ಲವೆ? ಇದ್ದರೆ ಯಾವ ಧಾತುವಿಗೆ? ಮೇಲಾಪಕವು ಇರಬೇಕೆ - ಕೂಡದೆ? ರಸಾಲಂಕಾರಗಳಲ್ಲಿ ವಿನಿಯೋಗವಿದೆಯೇ? ಮುಂತಾದ ಪ್ರಶ್ನೆಗಳಿಗೆ ಉತ್ತರವು - ಯಾವ ನಿಯಮಗಳೂ ಇಲ್ಲ. ಆದುದರಿಂದ ಗಣ, ವರ್ಣ ಮತ್ತು ಮಾತ್ರೆಗಳನ್ನು ಪ್ರತಿಯೊಂದು ಪಾದದಲ್ಲಿಯೂ ವಿನ್ಯಾಸ ಮಾಡುವುದನ್ನು ಮಾತ್ರ ಅವಲಂಬಿಸಿ ರಾಸವು ಮೂರು ವಿಧವಾಗಿದೆ. ಹೀಗೆ ಗಣರಾಸಕವು ಪ್ರತಿಪಾದದಲ್ಲಿಯೂ ಛ - ಪ - ಚ - ತ ಗಣಗಳನ್ನು ಮಾತ್ರ ಕ್ರಮವಾಗಿ ಬಳಸಿಕೊಳ್ಳುವ ರಾಸವಲಯ, ಹಂಸತಿಲಕ, ರತಿರಂಗಕ, ಮದನಾವತಾರ ಎಂಬ ನಾಲ್ಕು ಬಗೆ ; (ಮಾತ್ರಾಗಣಗಳು ಐದು ವಿಧ —ಛಗಣ, ಪಗಣ, ಚಗಣ, ತಗಣ, ದಗಣ ಎಂಬ ಅನುಕ್ರಮದಲ್ಲಿ ಇವೆ. ಛಗಣವು ಆರುಮಾತ್ರೆಗಳನ್ನುಳ್ಳದ್ದು — ಗಿರಿಶತನಯ ಎಂಬಂತೆ. ಪಗಣವು ಐದು ಮಾತ್ರೆಗಳದ್ದು —ಗಜವದನ ಎಂಬಂತೆ. ಚಗಣವು ನಾಲ್ಕು ಮಾತ್ರೆಯದು — ಪುರಹರ ಎಂಬಂತೆ. ತಗಣವು ಮೂರು ಮಾತ್ರೆಗಳದು —ಗಿರಿಶ ಎಂಬಂತೆ. ದಗಣವು ಎರಡು ಮಾತ್ರೆಯದು —ಹರ, ಶಿವ ಇತ್ಯಾದಿಯಾಗಿ - ಚತುರ್ದಂಡೀ ಪ್ರಕಾಶಿಕಾ, ಪ್ರಬಂಧ ಪ್ರಕರಣ

No part of this publication is allowed for copying or reproducing. Copyright protected. Copyright infringement is punishable offence.

{ಉ., ರಾ. ಸ., ಚತುರ್ದಂಡೀ ಪ್ರಕಾಶಿಕಾ., ಶ್ಲೋ. 425 - 428}) ವರ್ಣರಾಸಕದಲ್ಲಿ ಪ್ರತಿ ಪಾದದಲ್ಲಿಯೂ ಆರು ಅಕ್ಷರಗಳಿಂದ ಮೊದಲುಗೊಂಡು ಒಂದೊಂದೇ ಅಕ್ಷರವನ್ನಾಗಿ 30 ಅಕ್ಷರಗಳವರೆಗೆ ಹೆಚ್ಚಿಸುತ್ತ ಹೋಗುವ 25 ಒಳಬೇಧಗಳಿವೆ. ಮಾತ್ರಾರಾಸಕದಲ್ಲಿ ಪ್ರತಿಪಾದದಲ್ಲಿಯು 8 ಮಾತ್ರೆಗಳಿಂದ ಮೊದಲು ಮಾಡಿ ಒಂದೊಂದೇ ಮಾತ್ರೆಯನ್ನು 60 ಮಾತ್ರೆಗಳವರೆಗೆ ಹೆಚ್ಚಿಸುತ್ತ ಹೋಗುವ 54 ಪ್ರಬೇಧಗಳಿವೆ. ಹೀಗೆ ರಾಸದಲ್ಲಿ 82 ಭೇದಗಳಿದ್ದರೂ ವರ್ಣರಾಸಕ ಹಾಗೂ ಮಾತ್ರಾರಾಸಕಗಳು ಕ್ರಮೇಣ ವ್ಯವಹಾರ ಕ್ಷಮತೆಯನ್ನು ಕಳೆದುಕೊಂಡಿದ್ದವು.

ಪುಂಡರೀಕ ವಿಠಲನು ತನ್ನ ಕಾಲದಲ್ಲಿ ರೂಢಿಯಲ್ಲಿದ್ದ ನಾಲ್ಕು ವಿಧವಾದ ರಾಸಕಪ್ರಬಂಧಗಳನ್ನು ಅದು ಆಲಾಪದ ಮೊದಲು, ಮಧ್ಯೆ ಮತ್ತು ಅನಂತರ ಇತ್ಯಾದಿಗಳಿಂದ ಆಗುತ್ತದೆಂದೂ ಅವುಗಳು ನಾಲ್ಕು ವಿಧಗಳೆಂದೂ ಎಲ್ಲ ರಾಸಕಭೇದಗಳಲ್ಲಿಯೂ ಉದ್ಗ್ರಾಹವು ಎರಡು ಖಂಡದ್ದಾಗಿರುತ್ತದೆ— ಧ್ರುವದ ಕೊನೆಯಲ್ಲಿ ಆಲಾಪವಿರುವ ವಿನೋದರಾಸಕವು ಕೌತುಕದ ಸನ್ನಿವೇಶದಲ್ಲಿ ಪ್ರಯುಕ್ತವಾಗುತ್ತದೆ ; ಆಲಾಪವು ಮಧ್ಯದಲ್ಲಿರುವ ಧ್ರುವದಿಂದ ದೇವತಾಸ್ತುತಿಯಲ್ಲಿ ವರದರಾಸಕವು ರಚಿತವಾಗುತ್ತದೆ ; ನಂದರಾಸಕವು ಆಲಾಪದಿಂದ ನಿರ್ಮಿತವಾದ ಉದ್ಗ್ರಾಹವುಳ್ಳದ್ದು, ಇದು ಅಭ್ಯುದಯಕ್ಕಾಗಿ ಪ್ರಯೋಗಯೋಗ್ಯ ; ಆಲಾಪವು ಧ್ರುವದ ಮೊದಲಿನಲ್ಲಿ ಎಲ್ಲಿದೆಯೋ ಅದು ಕಂಬುಜರಾಸಕ , ಅದರ ವಿನಿಯೋಗವು ಕರುಣರಸದಲ್ಲಿ ಆಗುತ್ತದೆ ಎಂದು ಹೇಳಿದ್ದಾನೆ.

ಚರ್ಚರೀ ಎಂಬ ದೇಶೀವೃತ್ತವೂ ಒಂದಿದೆ. ಅದು ಸ್ವನಾಮಕ ಪ್ರಬಂಧ ಹಾಗೂ ತಾಳವೂ ಹೌದು. (ಚರ್ಚರಿಯು ಎಂಟು ವಿರಾಮದಲ್ಲಿ —ಮುಗಿಯುವ —ಎರಡು ದ್ರುತಗಳು, ನಂತರ ಲಘುಗಳಿಂದಾಗುತ್ತದೆ. —00'|00`|00`|00`|00`|00`|00`|00`|—ಚರ್ಚರೀ). ಅದನ್ನು ವೇಮಭೂಪಾಲನು ತನ್ನ ಸಂಗೀತಚಿಂತಾಯಣಿಯಲ್ಲಿ ರಾಸಕನೃತ್ಯಕ್ರಮದಲ್ಲಿ ಅನೇಕ ನರ್ತಕಿಯರು ಏರ್ಪಟ್ಟು, ವಾದ್ಯಗಳು ಒಟ್ಟಿಗೆ ನುಡಿಯುತ್ತಿರುವಾಗ ಶೃಂಗಾರ ವರ್ಣನೆಯನ್ನೊಳಗೊಂಡಂತಹ, ಗಾನವಸ್ತುವಿಗೆ ಉಚಿತವಾದ ಮಾತುಗಳನ್ನು ಒಳಗೊಂಡ ಚರ್ಚರೀ ಅಥವಾ ದ್ವಿಪದೀ ಪ್ರಬಂಧವನ್ನು ಪುನಃ ಪುನಃ ಹಾಡಿ ಇಬ್ಬಿಬ್ಬರಂತೆ ರಂಗವನ್ನು ಪ್ರವೇಶಿಸಿ ವಸಂತೋತ್ಸವ ಸಮಯದಲ್ಲಿ ನರ್ತನ ಮಾಡಿದರೆ ಅದು ಚರ್ಚರೀ ವೃತ್ತವಾಗುತ್ತದೆ ಎನ್ನುತ್ತಾನೆ (ಉದ್ಧೃತಿ ರಾಮಕೃಷ್ಣ ಕವಿ, ಭರತಕೋಶ ಪು. 293) ವೇದನು ಸಂಗೀತಮಕರಂದದಲ್ಲಿ ರಾಸಕಕ್ರಮದ ನರ್ತನದಲ್ಲಿ 'ತೇತಿಗಿಧ' ಎಂಬ ಶಬ್ದಗಳ (ಅಡವುಗಳ) ನ್ನು ರಾಸತಾಲ(ಆದಿತಾಲ, 'l') ದಲ್ಲಿ ನರ್ತಿಸಬೇಕೆಂದೂ ಅಥವಾ ಚರ್ಚರೀ ತಾಲದ ನಾಲ್ಕು ಆವರ್ತಗಳ ಅಳತೆಯಲ್ಲಿ ನಟಿಸಬೇಕೆಂದು ಹೇಳುತ್ತಾನೆ (ಉದ್ಧೃತಿ, ರಾಮಕೃಷ್ಣ ಕವಿ, ಭರತಕೋಶ, ಪು. 834).

ಕನ್ನಡಿಗನಾಗಿದ್ದ ಗೋವಿಂದದೀಕ್ಷಿತನ ಪುತ್ರ ವೆಂಕಟಮಖಿಯು ತನ್ನ ದೊರೆಯಾಗಿದ್ದ ತಂಜಾವೂರಿನ ದೊರೆ ವಿಜಯರಾಘವನನಾಯಕನ ಪ್ರೇರಣೆಯಿಂದ ರಚಿಸಿದ ಚತುರ್ದಂಡೀ

Copyright preserved

ಸಂಪುಟ 16 ; ಸಂಚಿಕೆ 1; ಜನವರಿ–ಏಪ್ರಿಲ್ 2022 ;

ಅಂಕಣ- ಭರತಕೌತುಕ

ಪ್ರಕಾಶಿಕಾ ಗ್ರಂಥದ ಪ್ರಬಂಧ ಪ್ರಕರಣದಲ್ಲಿ ರಾಸವು ತಾಳ, ದ್ರುತವೆಂಬ ಲಯ — ಇವುಗಳಿಂದ ಕೂಡಿರುವುದು ಎಂದು ಹೇಳುವುದಲ್ಲದೆ . ರಾಸಕಪ್ರಬಂಧ ಹಾಗೂ ಅದರ ವಿಧಗಳನ್ನು ಪಂಡರೀಕ ವಿಠ್ಠಲನಂತೆಯೇ ವರ್ಣಿಸುತ್ತ ರಾಸತಾಳದಲ್ಲಿ ರಚಿತವಾದುದರಿಂದ ರಾಸಕಗೀತವೆಂದು ಪ್ರಸಿದ್ಧಿ ಪಡೆದಿದೆ, ವಿನೋದ, ವರದ, ನಂದ, ಕಂಬುಜಗಳೆಂಬ ನಾಲ್ಕು ರಾಸಕ ವಿಧಗಳು — ಆಲಾಪದ ಕೊನೆಯಲ್ಲಿ ಧ್ರುವಪದದಿಂದ, ಕೌತುಕ ಭಾವದಲ್ಲಿ ವಿನೋದವೆಂಬ ರಾಸಕ, ವರದವು ಆಲಾಪದ ಮಧ್ಯದಲ್ಲಿ ಧ್ರುವಪದವಿರುವುದರಿಂದಲೂ, ದೇವತಾಸ್ಮರಣದಲ್ಲಿಯೂ ಗೇಯ ಎಂದು ವಿಧಿಸಲ್ಪಟ್ಟಿದೆ. ಎರಡು ಖಂಡಗಳನ್ನುಳ್ಳ ಉದ್ಗ್ರಾಹದಲ್ಲಿ ಮೊದಲನೆಯ ಖಂಡವನ್ನು ಆಲಾಪನೆ ಮಾಡುವುದೋ ಯಾವ ರಾಸದಲ್ಲಿದೆಯೋ, ಅದ್ಭುತದಲ್ಲಿ ಹಾಡುವ ಅದೇ ನಂದರಾಸಕ. ಧ್ರುವಪದದ ಮೊದಲಿನಲ್ಲಿ ಆಲಾಪವಿರುವುದು ಕರುಣರಸದಲ್ಲಿ ಹಾಡುವಂತಹದು ಕಂಬುಜರಾಸಕವಾಗುತ್ತದೆ, ಎಲ್ಲಾ ರಾಸಕಗೀತಗಳಲ್ಲಿಯೂ ಎರಡು ಖಂಡಗಳನ್ನುಳ್ಳ ಉದ್ಗ್ರಾಹವನ್ನು ನಿರ್ಮಿಸಬೇಕು ಎಂದು ಹೇಳುತ್ತಾನೆ.(ಉ., ರಾ. ಸ. ಚತುರ್ದಂಡೀ ಪ್ರಕಾಶಿಕಾ ) ಶಾರ್ಙ್ಗದೇವಾದಿಗಳೂ ರಾಸಕವನ್ನು ಹೇಳಿದ್ದರೂ ಮತಂಗನ ಬೃಹದ್ದೇಶಿಯ ಉಪಲಬ್ಧ ಗ್ರಂಥದಲ್ಲಿ ರಾಸಕಪ್ರಬಂಧವು ಕಾಣಸಿಗುವುದಿಲ್ಲ. ಆದರೆ ರಾಸತಾಲಕ್ಕೆ ಅನಂತರದ ಲಕ್ಷಣಕಾರರು ಸಮೀಕರಿಸಿದ ಆದಿತಾಲವನ್ನು ಸಿಂಹವಿಕ್ರಮ ಎಂಬ ಪ್ರಬಂಧಕ್ಕೆ ಆದಿತಾಲಪ್ರಯೋಗವಿದೆಯೆಂಬ ಲಕ್ಷಣವನ್ನು ನೀಡುತ್ತಾನೆ. ರಾಸಕ ಪ್ರಬಂಧವು ಆಯಾ ದೇಶೀ ಭಾಷೆಗಳಲ್ಲಿ ರಚಿತವಾಗಿರುತ್ತವೆ.

**ಮುಕ್ತಾಯ** —

ವಿಶ್ವದಲ್ಲಿ ಕೋಲಾಟವನ್ನು ಜನಪದ ನೃತ್ಯವೆಂದು ಪರಿಗಣಿಸುವಾಗಲೇ ಭಾರತದಲ್ಲಿ ಅದಕ್ಕೆ ಶಾಸ್ತ್ರೀಯವಾದ ಸ್ಥಾನಮಾನವಿತ್ತು. ಅನೇಕ ಶಸ್ತ್ರಾಸ್ತ್ರಗಳ, ಯುದ್ಧದ ವರಸೆಗಳು (ಅಭ್ಯಾಸಕ್ಕಾಗಿ ರಚಿಸಿದ ರೀತಿ, ವಿನ್ಯಾಸಗಳು) ಆಟಗಳಾಗಿ, ನರ್ತನಗಳಾಗಿ ಪರಿಣಾಮ ಹೊಂದಿದಂತೆಯೇ ಕೋಲಾಟ ನೃತ್ಯದ ಉಗಮವೂ ಆಗಿರಬಹುದು. ವಿಶ್ವದಾದ್ಯಂತ ದಂಡರಾಸದ ಮುಖ್ಯ ಸಮಾನಲಕ್ಷಣಗಳೆಂದರೆ ಮಂಡಲಾಕಾರವಾಗಿ, ಗುಂಪಾಗಿ ನರ್ತಿಸುವುದು, ಪುರುಷರ ನೃತ್ಯವು ಯುದ್ಧದ ವರಸೆಗಳನ್ನು ಹೋಲುವುದು, ಲಯದಲ್ಲಿ ಪ್ರಾವೀಣ್ಯತೆ, ದೇಹದ ಪಟುತ್ವ, ಧಾರ್ಮಿಕಾಚರಣೆಯ ಸಂದರ್ಭಗಳಲ್ಲಿ ನರ್ತಿಸುವುದು, ವೇಷಭೂಷಣಗಳಲ್ಲಿ ವೈವಿಧ್ಯತೆಯೂ ವಿವಿಧತೆಯೂ ವಿಶೇಷವಾಗಿ ಕಾಣುವುದು, ಬಹುಪಾಲು ದ್ವಿದಂಡರಾಸವು ಕೋಲು ಬಡಿಯುವುದರಲ್ಲಿ ಭಾರತದ ರೀತಿಗಳನ್ನು ಹೋಲುವುದು, ಇತ್ಯಾದಿಗಳು. ಯೋಗ್ಯ ರೀತಿಯಲ್ಲಿ, ವೈಜ್ಞಾನಿಕವಾಗಿ, ಶಾಸ್ತ್ರೀಯವಾಗಿ ಪ್ರಪಂಚದ ಸಮಗ್ರವಾದ ಕೋಲಾಟದ ಮೂಲ, ಅದರ ಹರವು, ಹೋಲಿಕೆ - ವ್ಯತ್ಯಾಸ, ಧಾರ್ಮಿಕಾಚರಣೆಯ ಸಂದರ್ಭಗಳು, ವೇಷಭೂಷಣಗಳು ಇತ್ಯಾದಿಗಳ ಸಂಶೋಧನೆಯಾದರೆ ಭಾರತದ ಪ್ರಾಚೀನ ಸಂಸ್ಕೃತಿಯ, ಜನಾಂಗಗಳ ಮೂಲ, ಅವುಗಳು ವಲಸೆ ಹೋದಂತಹ ದೇಶಗಳು ಮುಂತಾದ ವಿಷಯಗಳ ಮೇಲೆಯೂ, ನಶಿಸಿ ಹೋಗುತ್ತಿರುವ ಕತ್ತಿವರಸೆ, ದಂಡವರಸೆಗಳಂತಹ ಯುದ್ಧ ವಿದ್ಯೆಗಳ ಮೇಲೂ ಅಗಾಧವಾದ ಬೆಳಕು

Copyright preserved

ಚೆಲ್ಲಬಹುದು. ವಿದ್ವಾಂಸರು, ಇತಿಹಾಸ ತಜ್ಞರೂ ಇತ್ತ ಕಡೆ ಗಮನಹರಿಸಿಯಾರೆಂದು ಆಶಿಸೋಣವೇ?

----------------

Copyright preserved